ಹಣ್ಣುಗಳನ್ನೂ ಶುಕ್ರವಾರದ ಸಂತೆಗೆ ಮಾರಲು ತರುವ ರೈತಾಪಿ ಜನರು ಈ ನಡುವೆ ತಮ್ಮ ಹಲವು ಕಥೆಗಳನ್ನೂ, ಹಾಡುಗಳನ್ನೂ, ಸಂಕಟಗಳನ್ನೂ, ತಮಾಷೆಗಳನ್ನೂ, ಅರ್ಥವೇ ಆಗದ ವೈರುಧ್ಯಗಳ ವೃತ್ತಾಂತಗಳನ್ನೂ ಹೊತ್ತುಕೊಂಡು ನಮ್ಮ ಕಚೇರಿಗೂ ಬರುವ ದಿನ ಶುಕ್ರವಾರ. ಮಡಿಕೇರಿಯ ಸಂತೆಯ ದಿನ.

ಈ ಎಲ್ಲಕ್ಕಿಂತ ಮಿಗಿಲಾಗಿ ಶುಕ್ರವಾರದ ಹಗಲು ನಾನು ಕಾಯುವುದು ದೂರದಿಂದ ನನಗೆ ಮಾವನಾಗಬೇಕಾದ ಕಾಮ್ರೇಡ್ ಆಲಿ ರೈಟರಿಗಾಗಿ ಮತ್ತು ತೀಪಟ್ಟಿ ಮಲೆಯಿಂದ ಅವರು ಹೊತ್ತು ತರುವ ಬಗೆಬಗೆಯ ಖಾದ್ಯಗಳ ಟಿಫಿನ್ ಕ್ಯಾರಿಯರಿಗಾಗಿ. ಅವರ ಮಡದಿಯೂ ನನಗೆ ದೂರದಿಂದ ಅತ್ತೆಯೂ ಆಗಬೇಕಾದ ಅಮ್ಮಾಯಿಯವರು ಬೆಳಗ್ಗೆಯೇ ಎದ್ದು ನಾನು ಜೀವಬಿಡುವ ಬಗೆಬಗೆಯ ಖಾದ್ಯವೈವಿಧ್ಯಗಳನ್ನು ಆ ಟಿಫಿನ್ ಕ್ಯಾರಿಯರಿನಲ್ಲಿ ತುಂಬಿ ಭಾಗಮಂಡಲದಿಂದ ಬೆಳಗ್ಗೆಯೇ ಹೊರಡುವ ಶ್ರೀರಾಮ ಬಸ್ಸು ಹಿಡಿದು ಮಡಿಕೇರಿಗೆ ಹೊರಟ ಗಂಡ ಆಲಿ ರೈಟರ ಕೈಯಲ್ಲಿ ಕೊಡುತ್ತಿದ್ದರು.

ಅಕ್ಕಿಯ ರೊಟ್ಟಿ- ಕಣಿಲೆಯ ಪಲ್ಯ, ನೀರು ದೋಸೆ- ಮೀನಿನ ಗಸಿ, ತುಪ್ಪದ ಅನ್ನ- ಕೋಳಿಯ ಸಾರು, ತರಿ ಅಕ್ಕಿಯ ಗಂಜಿ- ಸಿಗಡಿ ಚಟ್ನಿ, ಗೋಧಿಯ ಪಾಯಸ, ಗಸಗಸೆಯ ಶರಬತ್ತು ಹೀಗೆ ನಾನು ಕನಸಲ್ಲಿ ಬಯಸುವ ಖಾದ್ಯಗಳೆಲ್ಲ ಅಯಾಚಿತವಾಗಿ ಶುಕ್ರವಾರದ ಶ್ರೀರಾಮ ಬಸ್ಸಲ್ಲಿ ಹೊರಟ ಕಾಮ್ರೇಡ್ ಆಲಿ ರೈಟರ ಕೈಚೀಲದೊಳಗಿನ ಟಿಫಿನ್ ಕ್ಯಾರಿಯರಿನೊಳಗೆ ಪರಿಮಳ ಸೂಸುತ್ತಾ ಬಂದು ನನ್ನನ್ನು ತಲುಪುತ್ತಿದ್ದವು.

ತೀಪಟ್ಟಿ ಮಲೆಯ ಅಮ್ಮಾಯಿಯವರಿಗೆ ನನ್ನ ಮೇಲೆ ಅದೇನೋ ಮಮತೆ. ಮನಸಿನ ಒಳಗೊಳಗೇ ನನ್ನಮೇಲೆ ಒಂದು ಬೆಟ್ಟವನ್ನೇ ಬೀಳಿಸಿಬಿಡುವಷ್ಟು ಸಿಟ್ಟಿದ್ದರೂ ಅವುಡುಗಚ್ಚಿ ರಾತ್ರಿಯೆಲ್ಲಾ ನಿದ್ದೆಗೆಟ್ಟಾದರೂ ಆ ಎಲ್ಲ ಖಾದ್ಯಗಳನ್ನು ತಯಾರಿಸಿ ಕಳಿಸುತ್ತಿದ್ದರು.

ಅವರಿಗೆ ನನ್ನ ಮೇಲೆ ಸಿಟ್ಟು ಯಾಕೆಂದರೆ ನನಗಾಗಿಯೇ ಅವರು ಸಾಕಿ ಬೆಳೆಸಿದ್ದ ಅವರ ಏಕೈಕ ಪುತ್ರಿ ಜುಬೇದಾಳನ್ನು ನಾನು ಮದುವೆಯಾಗಲು ಒಪ್ಪಿರಲಿಲ್ಲ. ಏನು ಕಾರಣವೋ ಗೊತ್ತಿಲ್ಲ. ಅವಳ ವೇಗದ ಜೊತೆ ನಾನು ಏಗುವುದು ಕಷ್ಟ ಎಂದು ನನಗನಿಸಿತ್ತು. ಅವಳ ಸೌಂದರ್ಯಕ್ಕಿಂತ ಹೆಚ್ಚಾಗಿ ಅವಳ ಚಂಚಲತೆ, ಅವಳ ಒಳ್ಳೆಯತನಕ್ಕಿಂತ ಹೆಚ್ಚಾಗಿ ಅವಳ ವಯ್ಯಾರ, ಅವಳ ಬುದ್ಧಿಶಕ್ತಿಗಿಂತ ಮಿಗಿಲಾಗಿದ್ದ ಅವಳ ಹುಚ್ಚುಹುಚ್ಚು ಕಲ್ಪನೆಗಳು ನನ್ನನ್ನು ಅಧೀರಗೊಳಿಸುತ್ತಿದ್ದವು. ಅದಕ್ಕಿಂತ ಹೆಚ್ಚಾಗಿ ಅವಳ ತಂದೆಯೂ ದೂರದಿಂದ ನನಗೆ ಮಾವನೂ ಆಗಬೇಕಿದ್ದ ಕಾಮ್ರೇಡ್ ಆಲಿ ರೈಟರ ರಾಜಕೀಯ ಲೆಕ್ಕಾಚಾರ ನನ್ನನ್ನು ಈ ಸಂಬಂಧದಿಂದ ಹೇಗಾದರೂ ತಪ್ಪಿಸಿಕೊಳ್ಳುವ ಹಾಗೆ ಮಾಡಿತ್ತು.

ವಿದ್ಯಾವಂತನೂ ಸರಕಾರಿ ನೌಕರನೂ ಆಗಿದ್ದ ನನ್ನ ಜೊತೆ ಮದುವೆ ಮಾಡಿಸಲೆಂದೇ ಅವಳನ್ನು ಅವರು ಸುಳ್ಯದಲ್ಲಿ ಡಿಗ್ರಿಯವರೆಗೆ ಓದಿಸಿದ್ದರು. ಒಂದು ಕಾಲದಲ್ಲಿ ಕವಿಯೂ, ತರುಣ ಕ್ರಾಂತಿಕಾರಿಯೂ ಆಗಿದ್ದ ನನಗೆ ಅವಳೊಡನೆ ನಿಖಾ ಮಾಡಿಸಿದರೆ ದುಡಿಯುವ ವರ್ಗದ ಸಶಸ್ತ್ರ ಕ್ರಾಂತಿಯ ಕೆಂಪು ಕಾರಿಡಾರಿಗೆ ಕರ್ನಾಟಕದಲ್ಲಿ ಇನ್ನಷ್ಟು ಕುಮ್ಮಕ್ಕು ಸಿಗುವುದು ಎಂದು ಅವಳಿಗೆ ಪದವಿಯಲ್ಲಿ ಕನ್ನಡ ಸಾಹಿತ್ಯ, ರಾಜ್ಯಶಾಸ್ತ್ರ, ಸಮಾಜ ವಿಜ್ಞಾನದಲ್ಲಿ ಪದವಿಯನ್ನೂ ಓದಿಸಿದ್ದರು.

ಅವಳ ತಾಯಿಯಾದ ಅಮ್ಮಾಯಿಯು ಮಗಳು ಜುಬೈದಾಳಿಗೆ ಅಡಿಗೆ ಮಾಡುವುದನ್ನೂ, ನಮಾಜು ಮಾಡುವುದನ್ನೂ ಕಲಿಸಲು ಕಷ್ಟಪಡುತ್ತಿದ್ದರೆ, ತಂದೆಯಾದ ಆಲಿ ರೈಟರು ಅವಳಿಗೆ ದುಡಿಯುವ ವರ್ಗದ ಇತಿಹಾಸವನ್ನು ಕಲಿಸಲು ಹೆಣಗುತ್ತಿದ್ದರು.

ಆದರೆ, ಇದಾವುದನ್ನೂ ತಲೆಗೆ ಹಾಕಿಕೊಳ್ಳದ ಮಗಳು ಕಾಲೇಜಿನಲ್ಲಿ ಕೋಕೋ ಆಟದ ಪಟುವೂ, ನೂರು ಮೀಟರು ಓಟದಲ್ಲಿ ಮೊದಲು ಬರುವವಳೂ ಆಗಿ ಅವರಿಬ್ಬರಿಗೆ ತಲೆ ನೋವು ಬರಿಸಿದ್ದಳು.

ಜೊತೆಗೆ ಆಟದ ನಡುವಿನ ಅವಳ ಪ್ರಣಯ ಪ್ರಸಂಗಗಳು ಅವರಿಗೆ ಇನ್ನಷ್ಟು ಸಂಕಟಗಳನ್ನು ತಂದೊಡ್ಡಿದ್ದವು. ತೊಡೆ ಕಾಣುವ ಹಾಗೆ ಕ್ರೀಡೆಯ ದಿರಿಸು ಧರಿಸಿ, ತಲೆಗೆ ಬಟ್ಟೆ ಹಾಕದೆ ಅವಳು ಚಿರತೆಯಂತೆ ಓಡುತ್ತಿದ್ದರೆ ಆ ಕ್ಷಣದಲ್ಲೇ ಅವಳಿಗೆ ಮೈದಾನದ ಹೊರಗೆ ಪ್ರಣಯ ಭಿಕ್ಷೆಯ ನೂರಾರು ಯಾಚನೆಗಳು ರವಾನೆಯಾಗುತ್ತಿದ್ದವು. ಯಾವುದೇ ತಾರತಮ್ಯವಿಲ್ಲದೆ ಆ ಯಾಚನೆಗಳನ್ನೆಲ್ಲವನ್ನೂ ಪರಿಶೀಲಿಸುವ ಚಾಕಚಕ್ಯತೆ ಹೊಂದಿದ್ದ ಆಕೆ ಸುಳ್ಯ ಸೀಮೆಯ ನೂರಾರು ಭಗ್ನ ಪ್ರೇಮಗಳಿಗೆ ಕಾರಣಳಾಗಿ ನೆಂಟರ ನಡುವೆ ಅಮ್ಮಾಯಿಯು ತಲೆ ಎತ್ತದ ಹಾಗೆ ಮಾಡಿದ್ದಳು.